





ತಮ್ಮ ಪ್ರತಿಭೆ ಅನಾವರಣಗೊಳಿಸಿದ್ದಾರೆ.

ಇವರು ಚಿತ್ರಕಲೆಗಳು ಚಿತ್ರಕಲಾ ಪರಿಷತ್‌ನಲ್ಲಿ ವರ್ಷದ ಮೊದಲ ಭಾನುವಾರ ನಡೆಯುವ ಚಿತ್ರಸಂತೆಯಲ್ಲಿ, ಜಿ.ಟಿ.ಆರ್.ಇಯ ರಾಜ್ಯೋತ್ಸವ ಸಂದರ್ಭದಲ್ಲಿ ಪ್ರದರ್ಶಿತವಾಗಿವೆ.

‘ಚಿತ್ರಕಲೆಯ ಹವ್ಯಾಸ ಮನಸ್ಸಿಗೆ ನೆಮ್ಮದಿಯ ಜೊತೆಗೆ ಉತ್ತಮ ಆರೋಗ್ಯವನ್ನು ಕೊಟ್ಟಿದೆ’ ಎನ್ನುತ್ತಾರೆ ಶ್ರೀಧರ್. ಪರಿಸರದ ಬಗ್ಗೆ ಅಪಾರ ಕಳಕಳಿ ಇರುವ ಇವರು ನಿಸರ್ಗವನ್ನು ಹಾಳಾಗದಂತೆ ಕಾಪಾಡಲು ತಮ್ಮದೇ ಐಡಿಯಾ ಬಳಸಿ ಮಳೆನೀರು ಕೊಯ್ಲು, ಟೆರೇಸ್ ಗಾರ್ಡನಿಂಗ್ ಮಾಡಿ ಮನೆಗೆ ಬೇಕಾಗುವ ತರಕಾರಿಗಳನ್ನು ಬೆಳೆದುಕೊಳ್ಳುತ್ತಾರೆ. ಮನೆಯಲ್ಲಿ ಬಯೋಗ್ಯಾಸ್, ಸೋಲಾರ್ ಕುಕ್ಕರ್ ಬಳಸುತ್ತಾರೆ. ತಮ್ಮ 50 ವರ್ಷ ವಯಸ್ಸಿನಲ್ಲೂ ಸಹ ಇನ್ನೇನಾದರೂ ಹೊಸದನ್ನು ಕಲಿಯಬೇಕೆಂಬ ಆಸೆ, ಹೆಚ್ಚು ತಿಳಿದುಕೊಳ್ಳುವ ತುಡಿತ ಇವರಿಗಿದೆ.

ಸಂಗೀತದ ಬಗ್ಗೆಯೂ ಇವರಿಗೆ ಅಗಾಧವಾದ ಒಲವು. ತಂತಿವಾದ್ಯಗಳ ತಾಯಿ ವೀಣೆಯನ್ನು ಕಲಿಯುವ ಹುಮ್ಮಸ್ಸು ಇದೀಗ ಬಂದಿದ್ದು, ವಿದುಷಿ ವಿಜಯಲಕ್ಷ್ಮಿ ಅವರ ಬಳಿ ವೀಣಾಭ್ಯಾಸದಲ್ಲೂ ನಿರತರಾಗಿದ್ದಾರೆ. ವೀಣೆಗೆ ಸಂಬಂಧಿಸಿದ ಪರೀಕ್ಷೆ ಎದುರಿಸಲೂ ಭರದಿಂದ ಸಿದ್ಧತೆ ನಡೆಸಿದ್ದಾರೆ.

ಕಲೆ, ಕಲೆಗಾರಿಕೆ, ಕಲಾರಾಧನೆ, ಪರಿಸರ ಕಾಳಜಿ, ಇನ್ನಷ್ಟು ಕಲಿಯುವ ತುಡಿತ.. ಎಲ್ಲವೂ ಮೇಳೈಸಿದ ಶ್ರೀಧರ್ ಕಲೋಪಾಸಕರಾಗಿದ್ದಾರೆ ಎಂದರೆ ತಪ್ಪಿಲ್ಲ.